**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಸನ್ನ ಎ. |
| ತಂದೆಯ ಹೆಸರು | : | ಅಜ್ಜಪ್ಪ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಹೋಟೆಲ್ ವ್ಯಾಪಾರ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 10

ದಿ: 16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-1 ನನ್ನ ಮಾವ. ಚಾಸಾ-9 ರವರ ಪರಿಚಯ ನನಗೆ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ. ಚಾಸಾ-1 ರವರು ತಳ್ಳೋ ಗಾಡಿಯಲ್ಲಿ ದೋಸೆ ವ್ಯಾಪಾರ ಮಾಡುತ್ತಾರೆ. ಚಾಸಾ-9 ರವರು ಚಾಸಾ-1 ರವರೊಂದಿಗೆ ಅದೇ ತಳ್ಳೋ ಗಾಡಿಯಲ್ಲಿ ಗೋಬಿ ವ್ಯಾಪಾರ ಮಾಡುತ್ತಾರೆ. ಆರೋಪಿಯು ತಳ್ಳೋ ಗಾಡಿಯಲ್ಲಿ ಮಂಡಕ್ಕಿ ವ್ಯಾಪಾರ ಮಾಡುತ್ತಾರೆ.

2. ದಿಃ 20-09-2022 ರಂದು ಆರೋಪಿಯು ಚಾಸಾ-9 ರವರೊಂದಿಗೆ ಹೈಸ್ಕೂಲ್ ಮೈದಾನದಲ್ಲಿ ಕೊಲೆ ಮಾಡುವ ಉದ್ದೇಶದಿಂದ ಜಗಳ ಮಾಡಿರುತ್ತಾರೆ. ಜಗಳ ತಳ್ಳೋ ಗಾಡಿಯನ್ನು ಅಕ್ಕಪಕ್ಕ ಇಡುವ ಬಗ್ಗೆ ಆಗಿರುತ್ತದೆ. ಈ ದಿನ ಗಲಾಟೆ ಆದ ಬಗ್ಗೆ ಚಾಸಾ-1 ರವರಿಗೆ ಚಾಸಾ-9 ರವರು ಫೋನ್ ಮಾಡಿ ತಿಳಿಸಿದರು.

3. ದಿಃ 21-09-2022 ರಂದು ಸಂಜೆ 5.30 ಗಂಟೆಗೆ ನಾನು, ಚಾಸಾ-1 ಮತ್ತು 9 ರವರು ತಳ್ಳೋ ಗಾಡಿಯನ್ನು ತೆಗೆದುಕೊಂಡು ಹೈಸ್ಕೂಲ್ ಮೈದಾನದಲ್ಲಿ ವ್ಯಾಪಾರ ಮಾಡಲು ಹೋಗಿದ್ದೆವು. ಹಿಂದಿನ ದಿನ ಜಗಳ ಆದ ಬಗ್ಗೆ ಪುನಃ ಅದೇ ವಿಷಯದ ಬಾಬ್ತು ಆರೋಪಿಯು ಬಂದು ಬೈದಾಡಿ ಚಾಕುವವನ್ನು ತೆಗೆದುಕೊಂಡು ಚಾಸಾ-1 ರವರ ಹೊಟ್ಟೆಗೆ ಹಾಕಲು ಬಂದಾಗ, ದೇವೇಂದ್ರ ನಾಯ್ಕ ಮತ್ತು ಇನ್ನೊಬ್ಬರು ಸೇರಿ ಚಾಸಾ-1 ರವರನ್ನು ಹಿಡಿದುಕೊಂಡಾಗ ಚಾಕು ಚಾಸಾ-1 ರವರ ಎಡಭುಜಕ್ಕೆ ಬಿತ್ತು. ಆರೋಪಿಯು ಚಾಸಾ-1 ರವರಿಗೆ ನಿನ್ನನ್ನು ಬಿಡುವುದಿಲ್ಲ ಕೊಲೆ ಮಾಡುತ್ತೇನೆ ಅಂತ ಹೇಳಿ ಚಾಕುವನ್ನು ಅಲ್ಲೇ ಎಸೆದು ಓಡಿ ಹೋದರು. ಈ ಗಲಾಟೆಯನ್ನು ನಾನು, ಚಾಸಾ-9, 11 ಮತ್ತು 12 ರವರು ಸೇರಿ ಬಿಡಿಸಿದೆವು. ನಂತರ ಚಾಸಾ-1 ರವರನ್ನು ನಾನು ಮತ್ತು ಚಾಸಾ-9 ರವರು ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆರೋಪಿಯು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವನ್ನು ಹಾಕಿರುತ್ತಾರೆ. ಚಾಸಾ-1 ರವರು ಆ ದಿನ ಹಳದಿ ಬಣ್ಣದ ಟಿ-ಶರ್ಟ ಮತ್ತು ಬಿಳಿ ಬಣ್ಣದ ಬನಿಯನ್ ಧರಿಸಿದ್ದರು. ಅವುಗಳ ಮೇಲೆ ರಕ್ತ ಬಿದ್ದಿತ್ತು. ಅವುಗಳನ್ನು ಈಗ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಅಂತ ಗುರುತಿಸಲಾಗಿದೆ. ಆ ಚಾಕವನ್ನು ನೋಡಿದರೆ ಗುರುತಿಸುತ್ತೇನೆ. ಚಾಕುವನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಚಾಕುವನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ಆ ದಿನ ಚಾಸಾ-1 ರವರಿಗೆ ಚಾಕು ಹಾಕಿ ಕೊಲೆ ಮಾಡಲು ಬಂದಿದ್ದ ಆರೋಪಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಇರುತ್ತಾರೆ. ಚಾಸಾ-1 ರವರು ಸಿ.ಜಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರು ಕೊಟ್ಟಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ:**

4. ದಿಃ 20-09-2022 ರಂದು ತಳ್ಳೋ ಗಾಡಿಯ ಇಡುವ ವಿಚಾರದಲ್ಲಿ ಗಲಾಟೆಯಾಗಿರುವುದು ನನಗೆ ಕೇಳಿ ಗೊತ್ತಿದೆ, ಸದರಿ ವಿಷಯವನ್ನು ನನ್ನ ಮಾವನಾದ ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ನಾನು ಖುದ್ದಾಗಿ ಆ ಘಟನೆಯನ್ನು ನೋಡಿಲ್ಲ. ನನ್ನ ಮಾವ ಪೋನ್ ನಲ್ಲಿ ಘಟನೆ ಬಗ್ಗೆ ವಿಷಯ ತಿಳಿಸಿದರು ಅಂತ ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ.

5. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನಾನು ನನ್ನ ಹೇಳಿಕೆಯಲ್ಲಿ ದೇವೇಂದ್ರನಾಯ್ಕು ಮತ್ತು ಧನಂಜಯ್ಯ ನಾಯ್ಕುರವರು ಆರೋಪಿಯನ್ನು ಹಿಡಿದುಕೊಂಡಿದ್ದರು ಅಂತ ಹೇಳಿಲ್ಲ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಆರೋಪಿಯು ಚಾಕುವನ್ನು ಎಸೆದು ಹೋದರು ಅಂತ ಹೇಳಿರುವುದಾಗಿ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಚಾಸಾ-9 , 11 ಮತ್ತು 12 ರವರು ಬಂದು ಜಗಳ ಬಿಡಿಸಿದರು ಅಂತ ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಹೇಳಿಕೆಯಲ್ಲಿ ನಾನು ಸಹ ಹೋಟೆಲ್ ವ್ಯಾಪಾರ ಮಾಡಿಕೊಂಡಿದ್ದೇನೆ ಅಂತ ಪೊಲೀಸರಿಗೆ ತಿಳಿಸಿದ್ದೇನೆ. ಪೊಲೀಸರಿಗೆ ಹೇಳಿಕೆ ಕೊಡುತ್ತಿರುವಾಗ ನಾನು ಹೂವು ವ್ಯಾಪಾರ ಮಾಡಿಕೊಂಡಿದ್ದೆ. ನಾನು ಹೋಟೆಲ್ ಅಥವಾ ಹೂವು ವ್ಯಾಪಾರ ಮಾಡುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ಮು.ಮಾ.1 ಮತ್ತು 2 ರಂತಹ ಬಟ್ಟೆಗಳು ಮತ್ತು ಮು.ಮಾ.3 ರ ಚಾಕು ಎಲ್ಲರ ಮನೆಯಲ್ಲಿ ಸಿಗುತ್ತವೆ ಅಂದರೆ ಗಲಾಟೆ ಕಾಲಕ್ಕೆ ನಾನು ನೋಡಿದ್ದೆ. ಅವುಗಳನ್ನು ಗುರುತಿಸಿದ್ದು, ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮಾವ ಎನ್ನುವ ಕಾರಣಕ್ಕಾಗಿ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯು ಚಾಸಾ-9 ರವರೊಂದಿಗೆ ಹೈಸ್ಕೂಲ್ ಮೈದಾನದಲ್ಲಿ ಜಗಳ ಮಾಡಿದ್ದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ

ಸರಿಯಲ್ಲ. ಆರೋಪಿಯು ಚಾಸಾ-1 ರವರು ಭುಜಕ್ಕೆ ಚಾಕು ಹಾಕಿದ್ದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.